**<u>ದಿಃ 31.01.2024 ರಂದು ಸಾಕ್ಷಿಯನ್ನು ಕರೆಸಿ ಪ್ರಮಾಣ ವಚನ ಭೋಧಿಸಲಾಯಿತು.</u>**

**<u>ಪಾಟೀ ಸವಾಲುಃ ವಾದಿ ಪರ ವಕೀಲರಿಂದಃ</u>**

1. ಸಾಕ್ಷಿಗೆ ದಿಃ31.01.1984 ರಲ್ಲಿ ಮೊಣ್ಣಪ್ಪ, ಕುಶಾಲಪ್ಪ, ದೊಡ್ಡಯ್ಯ ಮತ್ತು ಜೋಯಪ್ಪರವರ ನಡುವೆ ಆಲೆಟ್ಟಿ ಗ್ರಾಮದಲ್ಲಿ ಇರುವ ಆಸ್ತಿಗೆ ಸಂಬಂಧಿಸಿದಂತೆ ಆದಂತಹ ನೋಂದಾಯಿತ ವಿಭಾಗ ಪತ್ರದ ದೃಢೀಕೃತ ನಕಲನ್ನು ತೋರಿಸಿದ್ದು ಅದನ್ನು ಸಾಕ್ಷಿ ನೋಡಿ ಒಪ್ಪಿದ ಮೇರೆಗೆ ನಿಪಿ-35 ಎಂದು ಗುರುತಿಸಲಾಯಿತು. ನಿಪಿ-35 ವಿಭಾಗ ಪತ್ರದ ಪ್ರಕಾರ ನಮ್ಮ ಕುಟುಂಬಕ್ಕೆ ಸಂಬಂಧಿಸಿದಂತೆ ಗಾಳಿಬೀಡುವಿನಲ್ಲಿ ಇರುವ ಆಸ್ತಿ ವಿಭಾಗ ಆಗಿರುವುದಿಲ್ಲ ಎಂದರೆ ಸರಿ. ದಿಃ 02.03.1972 ರಂದು ನಾನು ಹೇಳುವ ಹಾಗೆ ಆಗಿರುವಂತಹ ವಿಭಾಗದ ಮಹಜರನ್ನು ನ್ಯಾಯಾಲಯಕ್ಕೆ ಹಾಜರು ಪಡಿಸಿರುತ್ತೇನೆ. ನಾನು ಹೇಳುವಂತಹ ವಿಭಾಗದ ಮಹಜರ್ ಪ್ರಕಾರ ಗಾಳಿಬೀಡುವಿನಲ್ಲಿ ಇರುವ ಆಸ್ತಿಯನ್ನು ಮೊಣ್ಣಪ್ಪ ಮತ್ತು ದೊಡ್ಡಯ್ಯರವರ ಹಿಸ್ಸೆಗೆ ಬಂದಿರುತ್ತದೆ.

2. ಕಾಲೂರಿನಲ್ಲಿ ಇರುವಂತಹ ಆಸ್ತಿಯನ್ನು ತಿಮ್ಮಯ್ಯರವರು ಮಾರಾಟ ಮಾಡಿರುತ್ತಾರೆ. ಈಗ ಕಾಲೂರಿನಲ್ಲಿ ಯಾವುದೇ ಆಸ್ತಿ ಇರುವುದಿಲ್ಲ. ತಿಮ್ಮಯ್ಯರವರು ಕಾಲೂರಿನಲ್ಲಿ ಇರುವಂತಹ ಆಸ್ತಿಯನ್ನು ಮಾರಾಟ ಮಾಡಿ ಸುಳ್ಯ ತಾಲೂಕಿನ ಆಲೆಟ್ಟಿ ಗ್ರಾಮದಲ್ಲಿ ಆಸ್ತಿಯನ್ನು ಖರೀದಿಸಿರುತ್ತಾರೆ ಎಂದರೆ ಸುಳ್ಳು. ಸಾಕ್ಷಿ ಮುಂದುವರೆದು ಮೋದೂರುವಿನಲ್ಲಿ ಆಸ್ತಿಯನ್ನು ಖರೀದಿಸಿರುತ್ತಾರೆ ಎಂದು ನುಡಿಯುತ್ತಾರೆ. ಮೋದೂರಿನಲ್ಲಿ ಇದ್ದಂತಹ ಆಸ್ತಿಯನ್ನು ತಿಮ್ಮಯ್ಯರವರು ಮಾರಾಟ ಮಾಡಿರುತ್ತಾರೆ. ನಂತರದಲ್ಲಿ ತಿಮ್ಮಯ್ಯರವರು ಆಲೆಟ್ಟಿ ಗ್ರಾಮದಲ್ಲಿ ಆಸ್ತಿಯನ್ನು ಖರೀದಿಸಿರುತ್ತಾರೆ ಎಂದರೆ ಸರಿ.

3. ಚೇರಳ ಶ್ರೀಮಂಗಲದಲ್ಲಿ ಇರುವ ಆಸ್ತಿಯನ್ನು ಕ್ರಯಪತ್ರದ ಮುಖೇನ ಕುಶಾಲಪ್ಪರವರು ಖರೀದಿಸಿರುತ್ತಾರೆ ಎಂದರೆ ಸರಿ. ಸದರಿ ಆಸ್ತಿ ಕುಶಾಲಪ್ಪರವರ ಸ್ವಾಧೀನದಲ್ಲಿಯೇ ಇತ್ತು ಮತ್ತು ನಂತರದಲ್ಲಿ ಅವರು ಅದನ್ನು ಮಾರಾಟ ಮಾಡಿರುತ್ತಾರೆ ಎಂದರೆ ಸರಿ. ಕುಶಾಲಪ್ಪರವರು ಸದರಿ ಆಸ್ತಿಯನ್ನು ಮಾರಾಟ ಮಾಡುವ ಸಮಯದಲ್ಲಿ ಸದರಿಯವರು ಅವರ ಸಹೋದರರ ಒಪ್ಪಿಗೆಯನ್ನು

ಪಡೆದುಕೊಂಡಿರುವುದಿಲ್ಲ ಎಂದರೆ ಸರಿ. ಸದರಿ ಆಸ್ತಿ ಕುಶಾಲಪ್ಪರವರ ಸ್ವಯಾರ್ಜಿತ ಆಸ್ತಿ ಆಗಿದ್ದರಿಂದ ಅವರು ತಮ್ಮ ಸಹೋದರರ ಒಪ್ಪಿಗೆಯನ್ನು ಪಡೆದುಕೊಂಡಿರುವುದಿಲ್ಲ ಎಂದರೆ ಸುಳ್ಳು. ಸಾಕ್ಷಿ ಮುಂದುವರೆದು ಕಾಲೂರಿನಲ್ಲಿ ಇದ್ದಂತಹ ಆಸ್ತಿಯನ್ನು ಮಾರಾಟ ಮಾಡಿ ಅದರಲ್ಲಿ ಬಂದಂತಹ ಹಣದಿಂದ ಚೇರಳ ಶ್ರೀಮಂಗಲದ ಆಸ್ತಿಯನ್ನು ಖರೀದಿಸಿದ್ದರು ಎಂದು ನುಡಿಯುತ್ತಾರೆ. ಕುಶಾಲಪ್ಪರವರು ಕಾಲೂರಿನಲ್ಲಿ ಇದ್ದಂತಹ ಆಸ್ತಿಯನ್ನು ಮಾರಾಟ ಮಾಡಿ ಅದರಲ್ಲಿ ಬಂದಂತಹ ಹಣದಿಂದ ಚೇರಳ ಶ್ರೀಮಂಗಲದ ಆಸ್ತಿಯನ್ನು ಖರೀದಿಸಿರುತ್ತಾರೆ ಎಂದು ತೋರಿಸಲು ನನ್ನ ಬಳಿ ದಾಖಲೆ ಇದೆ. ಸದರಿ ದಾಖಲೆಗಳನ್ನು ನಾನು ನ್ಯಾಯಾಲಯಕ್ಕೆ ಹಾಜರುಪಡಿಸಿರುವುದಿಲ್ಲ. ಕುಶಾಲಪ್ಪರವರಿಗೆ ನನ್ನ ತಾತ ಆಸ್ತಿಯನ್ನು ಖರೀದಿಸುವ ಸಲುವಾಗಿ ಹಣವನ್ನು ಕೊಟ್ಟಿರುತ್ತಾರೆ. ಅದರ ಬಗ್ಗೆ ತೋರಿಸಲು ನನ್ನ ಬಳಿ ದಾಖಲೆ ಇರುವುದಿಲ್ಲ.

4. ಕುಶಾಲಪ್ಪರವರು ಭತ್ತದ ವ್ಯಾಪಾರ ಮಾಡುತ್ತಿದ್ದು ಅದರಿಂದ ಬಂದಂತಹ ಆದಾಯದಿಂದ ಚೇರಳ ಶ್ರೀಮಂಗಲದಲ್ಲಿ ಆಸ್ತಿಯನ್ನು ಖರೀದಿಸಿರುತ್ತಾರೆ ಎಂದರೆ ಸುಳ್ಳು. ನನ್ನ ತಾತನಾದ ತಿಮ್ಮಯ್ಯರವರು ಕುಶಾಲಪ್ಪರವರಿಗೆ ಯಾವುದೇ ಹಣವನ್ನು ಕೊಟ್ಟಿರುವುದಿಲ್ಲ ಆದ್ದರಿಂದ ನಮ್ಮ ಬಳಿ ಯಾವುದೇ ದಾಖಲೆ ಇರುವುದಿಲ್ಲ ಎಂದರೆ ಸರಿ.

ಈ ಹಂತದಲ್ಲಿ ಮುಂದುವರೆದ ಪಾಟೀ ಸವಾಲಿಗೆ ಸಮಯ ಕೋರಿದ್ದಾರೆ. ಸಮಯ ನೀಡಲಾಯಿತು.

(ತೆರೆದ ನ್ಯಾಯಾಲಯದಲ್ಲಿ ಬೆರಳಚ್ಚು ಮಾಡಲಾಯಿತು.)

ಓ.ಹೇ.ಕೇ.ಸರಿ.ಇದೆ.

ಸಹಿ/-
(ಎನ್ ಬಿ ಜಯಲಕ್ಷ್ಮಿ)
ಹಿರಿಯ ಸಿವಿಲ್ ನ್ಯಾಯಾಧೀಶರು,
ಕೊಡಗು, ಮಡಿಕೇರಿ.